

ತುತ್ತು ಉಣಿಸುತ್ತಿರುವ ಆಶ್ರಮದ ಸಿಬ್ಬಂದಿ

ತರಬೇತಿಗಳನ್ನೂ ಪೂರೈಸಿದ್ದಾರೆ. 'ಆಶ್ರಮದ ಹಿರಿಯರೇ ತರಬೇತಿ ಕೊಡಿಸಿದರು. ನಾನು ಇಲ್ಲೇ ಉದ್ಯೋಗ ಮುಂದುವರಿಸಿದ್ದೇನೆ' ಎನ್ನುತ್ತಾರೆ ಅವರು. ಇಲ್ಲಿನ ನಿವಾಸಿಗಳ ಆರೋಗ್ಯ ರಕ್ಷಣೆಯ ಪೂರ್ಣ ಜವಾಬ್ದಾರಿ ಇವರದ್ದೇ. ಇಂಥ ನುರಿತ ಮೂವತ್ತು ಸಿಬ್ಬಂದಿ ನಿವಾಸಿಗಳ ಆರೈಕೆಗೆ ಸನ್ನದ್ಧರಾಗಿರುತ್ತಾರೆ.

## ಒಬ್ಬೊಬ್ಬರದು ಒಂದೊಂದು ಕಥೆ...

ಒಬ್ಬೊಬ್ಬರನ್ನೇ ದೂರದಿಂದಲೇ ಪರಿಚಯಿಸಿದ ಬುಜ್ಜಿ, 'ಇಲ್ಲಿ ಬುದ್ಧಿಮಾಂದ್ಯ ಹಾಗೂ ವಿವಿಧ ಮಾನಸಿಕ ಸಮಸ್ಯೆಗಳಿರುವ (ಮೆಂಟಲಿ ರಿಟಾರ್ಡ್‌ನೆಸ್, ಮೆಂಟಲಿ ಇಲ್‌ನೆಸ್) 55 ಮಂದಿ ಮಹಿಳೆಯರು ಆರೈಕೆ, ಚಿಕಿತ್ಸೆಗಾಗಿ ದಾಖಲಾಗಿದ್ದಾರೆ. ಇವರಲ್ಲಿ ಕೆಲವರಿಗೆ ಮಾನಸಿಕ ಸಮಸ್ಯೆಗಳ ಜೊತೆಗೆ ಫಿಟ್ಸ್, ಸೆರಬ್ರಲ್ ಪಾಲ್ಸಿ, ಸ್ಕಿಜೋಫ್ರೇನಿಯಾ, ಖಿನ್ನತೆಯಂತಹ ಸಮಸ್ಯೆಗಳೂ ಇವೆ.

ತಿರುಪತಿ ತಿರುಮಲ ದೇವಾಲಯದ (ಟಿಟಿಡಿ) ಬಾಲಮಂದಿರದವರು ದೇವಾಲಯದ ಆವರಣದಲ್ಲಿ ಪತ್ತೆಯಾದ ಬುದ್ಧಿಮಾಂದ್ಯ ಅನಾಥ ಮಕ್ಕಳನ್ನು ಈ ಆಶ್ರಮಕ್ಕೆ ಕಳಿಸುತ್ತಾರೆ. ಒಮ್ಮೊಮ್ಮೆ ಪೊಲೀಸರೂ ಇಂಥವರನ್ನು ಇಲ್ಲಿಗೆ ಕಳಿಸಿದ್ದಾರೆ. ಅಂಥ ಮಕ್ಕಳೆಲ್ಲ ಇಲ್ಲಿ ಆಶ್ರಯ ಪಡೆದಿದ್ದಾರೆ. ಆ ಬಾಲಕಿಯರು, ಹಸುಗೂಸುಗಳು ಈ ಆಶ್ರಮದಲ್ಲೇ ಬೆಳೆದು ದೊಡ್ಡವರಾಗಿದ್ದಾರೆ. ಅವರಿಗೆಲ್ಲ ಆಶ್ರಮದವರೇ ಹೆಸರು ಇಟ್ಟು ಪೋಷಿಸುತ್ತಿದ್ದಾರೆ.

ಇದಲ್ಲದೇ, ಅಪ್ಪ ಎರಡನೆಯ ಮದುವೆಯಾದ ಮೇಲೆ, ಖಿನ್ನತೆಗೊಳಗಾದ ಮಗಳನ್ನು ತಂದೆಯೇ ಆರೈಕೆಗಾಗಿ ಈ ಆಶ್ರಮಕ್ಕೆ ತಂದುಬಿಟ್ಟಿದ್ದಾರೆ. ಮನೆಯಲ್ಲಿ ಬುದ್ಧಿಮಾಂದ್ಯ ಮಕ್ಕಳಿದ್ದರೆ, ಸುತ್ತಲಿನವರು ಇಲ್ಲದ ಮಾತುಗಳನ್ನಾಡುತ್ತಾರೆ ಎಂಬ ಸಾಮಾಜಿಕ ಕಾರಣಗಳಿಗಾಗಿ ಈ ಆಶ್ರಮಕ್ಕೆ ಕಳುಹಿಸಿರುವ ಹೆಣ್ಣುಮಕ್ಕಳೂ ಇದ್ದಾರಂತೆ.

ಬಹು ಅಂಗವೈಕಲ್ಯ, ಬುದ್ಧಿಮಾಂದ್ಯತೆ ಎರಡೂ ಇರುವ, ಹೇಳಿದ್ದನ್ನು ಅರ್ಥಮಾಡಿಕೊಳ್ಳದ, ತನಗನ್ನಿಸಿದ್ದನ್ನು ಹೇಳಲು ಸಾಧ್ಯವಾಗದ, ಸಂಜ್ಞೆಗಳಲ್ಲೇ ಮಾತಾಡುವ ಹೆಣ್ಣುಮಕ್ಕಳಿದ್ದಾರೆ. ನೋಡುವುದಕ್ಕೆ ಅಂದವಾಗಿದ್ದವರು, ಹಾಡು–ಹಸೆ, ಚಿತ್ರಕಲೆಯಲ್ಲಿ ಕೌಶಲವಿದ್ದೂ ಮಾನಸಿಕ ಅಸ್ವಸ್ಥರಾಗಿರುವ ಹಿರಿಯ–ಕಿರಿಯ ಮಹಿಳೆಯರು ಅಕ್ಷಯ ಕ್ಷೇತ್ರದಲ್ಲಿದ್ದಾರೆ. ಆಂಧ್ರಪ್ರದೇಶದ ಬೇರೆ ಬೇರೆ ಜಿಲ್ಲೆಯಲ್ಲದೇ, ಕರ್ನಾಟಕದ ಮಹಿಳೆಯರೂ ಈ ಆಶ್ರಮದಲ್ಲಿದ್ದಾರೆ. ಬೆಂಗಳೂರಿನ ನಿಮ್ಹಾನ್ಸ್ ಆಸ್ಪತ್ರೆಯಲ್ಲಿ ರೋಗ ಗುಣವಾಗದವರು ಇಲ್ಲಿಗೆ ಬಂದು ನೆಲೆಸಿದ್ದಾರೆ.

## ನಿವಾಸಿಗಳ ಆರೈಕೆಗೆ ಹಲವು ರೂಪ

ಇಲ್ಲಿ ಕೆಲವರಿಗೆ ಔಷಧದ ಮೂಲಕ ಚಿಕಿತ್ಸೆಯಾದರೆ, ಇನ್ನೂ ಕೆಲವರಿಗೆ ಕೌನ್ಸೆಲಿಂಗ್, ಯೋಗ, ಧ್ಯಾನ,

## ಸರ್ಕಾರದ ನೆರವಿಲ್ಲ, ದಾನಿಗಳೇ ಎಲ್ಲ

ಆಶ್ರಮ ಆರಂಭವಾಗಿ ಇಪ್ಪತ್ತಾರು ವರ್ಷಗಳಾಗಿವೆ. ಆಶ್ರಮ ನಡೆಸುವುದಕ್ಕಾಗಿ ಸರ್ಕಾರದಿಂದ ಈವರೆಗೂ ಯಾವುದೇ ಆರ್ಥಿಕ ನೆರವು ಪಡೆದಿಲ್ಲ. ರಾಮಸ್ವಾಮಿಯವರ ಹಿತೈಷಿಗಳು, ಲಾವಣ್ಯ–ಗೋಪಾಲ್ ರಾವ್ ಅವರ ಸ್ನೇಹಿತರು, ಬಂಧುಗಳು ಆಶ್ರಮದ ಚಟುವಟಿಕೆಗಳಿಗೆ ಕೈ ಜೋಡಿಸಿದ್ದಾರೆ. ಸತ್ಯಪ್ರಸಾದ್ ಅವರಂತಹ ಅನೇಕ ಗೆಳೆಯರು ತಮ್ಮ ಕೈಲಾದ ಸೇವೆ ಸಲ್ಲಿಸುವುದಕ್ಕಾಗಿ ಆಶ್ರಮಕ್ಕೆ ಬರುತ್ತಾರೆ. ಔಷಧ, ಬಟ್ಟೆಗಳು, ಬೆಡ್ ಶೀಟ್, ಎಲೆಕ್ಟ್ರಿಕಲ್, ಎಲೆಕ್ಟ್ರಾನಿಕ್ ಉಪಕರಣಗಳು, ವ್ಯಾಯಾಮ ಉಪಕರಣಗಳು ಸೇರಿದಂತೆ ಅಗತ್ಯವಿರುವ ವಸ್ತುಗಳನ್ನು ದಾನವಾಗಿ ನೀಡುತ್ತಿದ್ದಾರೆ. ತಿರುಪತಿ ತಿರುಮಲ ದೇವಸ್ಥಾನ (ಟಿಟಿಡಿ) ಆರಂಭದಿಂದಲೂ ಆಶ್ರಮದ ನೆರವಿಗೆ ನಿಂತಿದೆ.

ಸ್ಥಳೀಯ ನಾಗರಿಕರು, ಸಂಘ ಸಂಸ್ಥೆಗಳು ಆಶ್ರಮದಲ್ಲಿ ಹುಟ್ಟಿದ ಹಬ್ಬ, ನಾಮಕರಣ, ವಿವಾಹ ವಾರ್ಷಿಕೋತ್ಸವದಂತಹ ಕಾರ್ಯಕ್ರಮಗಳನ್ನು ನಡೆಸುತ್ತಿರುತ್ತಾರೆ. ಟಿಟಿಡಿಯಿಂದ ಪ್ರತಿ ವಾರ ಅನ್ನದಾನ ನಡೆಯುತ್ತಿದೆ. ಈ ಎಲ್ಲ ಕಾರ್ಯಕ್ರಮಗಳು ಆಶ್ರಮಕ್ಕೆ ಶಕ್ತಿ ನೀಡುವ ಜೊತೆಗೆ, ನಿವಾಸಿಗಳಿಗೆ ಹೊಸ ವಾತಾವರಣ ಕಲ್ಪಿಸುತ್ತಿವೆ ಎನ್ನುತ್ತಾರೆ ಲಾವಣ್ಯ–ಗೋಪಾಲ್ ರಾವ್.

ಸ್ಥಳೀಯ ಪಂಚಾಯ್ತಿಯವರ ನೆರವನ್ನು ಪ್ರೀತಿಯಿಂದ ಸ್ಮರಿಸುತ್ತಾರೆ ಆಶ್ರಮದ ಆಡಳಿತ ಮಂಡಳಿಯವರು. ಆಶ್ರಮ ನಿವಾಸಿಗಳಿಗೆ ದೊರೆಯುವ ಪಿಂಚಣಿ, ಅನಾರೋಗ್ಯದಿಂದ ಮೃತಪಟ್ಟವರ ಅಂತ್ಯಕ್ರಿಯೆ ಸೇರಿದಂತೆ ಅನೇಕ ಸಂದರ್ಭಗಳಲ್ಲಿ ಪಂಚಾಯ್ತಿಯವರು ಆಶ್ರಮದ ಕೆಲಸಕ್ಕೆ ಕೈಜೋಡಿಸಿದ್ದಾರೆ. 'ಸ್ಥಳೀಯರು, ಸ್ನೇಹಿತರು, ದಾನಿಗಳ ನೆರವಿನಿಂದಾಗಿಯೇ ತಂದೆಯ ಸೇವಾ ಕಾರ್ಯ ಮುಂದುವರಿಸಲು ಸಾಧ್ಯವಾಗಿದೆ' ಎನ್ನುತ್ತಾರೆ ಲಾವಣ್ಯ.

ಪ್ರತಿ ವರ್ಷ ಜನವರಿ 1ರ ಹೊಸ ವರ್ಷಾಚರಣೆ, ಗಾಂಧಿ ಜಯಂತಿ, ಮಕ್ಕಳ ದಿನಾಚರಣೆ, ಸ್ವಾತಂತ್ರ್ಯೋತ್ಸವ... ಹೀಗೆ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸುತ್ತಾರೆ. ಆ ಕಾರ್ಯಕ್ರಮಗಳಿಗೆ ಗಣ್ಯವ್ಯಕ್ತಿಗಳು, ಸಾರ್ವಜನಿಕರು ಹಾಗೂ ಆಶ್ರಮದ ನಿವಾಸಿಗಳ ಕುಟುಂಬದವರನ್ನು ಆಹ್ವಾನಿಸುತ್ತಾರೆ. ಅವರೆಲ್ಲರ ಸಮ್ಮುಖದಲ್ಲಿ ಎರಡೂ ಆಶ್ರಮಗಳ ನಿವಾಸಿಗಳು ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಡುತ್ತಾರೆ. ಈ ಪ್ರದರ್ಶನದ ಮೂಲಕ ಆಶ್ರಮದ ನಿವಾಸಿಗಳ ಆರೋಗ್ಯದಲ್ಲಿ ಯಾವ ರೀತಿ ಪ್ರಗತಿಯಾಗಿದೆ, ಅವರ ಐಕ್ಯೂ ಎಷ್ಟು ಸುಧಾರಿಸಿದೆ ಎಂಬ ಮಾಹಿತಿಯನ್ನು ಆಶ್ರಮದ ಸಿಬ್ಬಂದಿ ಸಾರ್ವಜನಿಕರಿಗೆ ತಿಳಿಸುತ್ತಾರೆ. ಇದೊಂದು ರೀತಿ ನಿವಾಸಿಗಳ ಆರೋಗ್ಯ ಪ್ರಗತಿ ಪ್ರದರ್ಶನದ ವೇದಿಕೆಯೂ ಆಗಿರುತ್ತದೆ.

ಎರಡೂ ಆಶ್ರಮಗಳಲ್ಲೂ ಈಗಿರುವ ಸಿಬ್ಬಂದಿ ಸೌಲಭ್ಯಗಳಿಗೆ ಅನುಗುಣವಾಗಿ ನಿವಾಸಿಗಳಿದ್ದಾರೆ. ಸಂಖ್ಯೆ ಹೆಚ್ಚಾದರೆ ನಿರ್ವಹಣೆ ಕಷ್ಟ. ಹಾಗಾಗಿ ಹೊಸ ಸದಸ್ಯರ ಪ್ರವೇಶವನ್ನು ಸ್ಥಗಿತಗೊಳಿಸಿದ್ದೇವೆ ಎನ್ನುತ್ತಾರೆ ಲಾವಣ್ಯ.